ಭದ್ರಾ ಅಭಯಾರಣ್ಯ ಪುನರ್ವಸತಿಗಾಗಿ ಬಿಡುಗಡೆಯಾದ ಜಮೀನು

2488 (3100) : ಶ್ರೀ ನೀಲಕಂಠ.ಬಿ.ಆರ್. (ತರೀಕೆರೆ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತರೀಕೆರೆ ತಾಲ್ಲೂಕು ಎಂ.ಸಿ.ಹಳ್ಳಿ ಗ್ರಾಮದಲ್ಲಿ ಭದ್ರಾ ಅಭಯಾರಣ್ಯ ಪುನರ್ವಸತಿಗಾತಿ ಬಿಡುಗಡೆಯಾಗಿರುವ ಜಮೀನು ಎಷ್ಟು; (ಪೂರ್ಣ ವಿವರಗಳನ್ನು ಫಲಾನುಭವಿಗಳ ವಿವರಗಳನ್ನು ಫಲಾನುಭವಿಗಳ ಹೆಸರಿನೊಂದಿಗೆ ನೀಡುವುದು)

ಆ) ಜಿಲ್ಲಾಧಿಕಾರಿಗಳು ನೇರವಾಗಿ ಹಕ್ಕು ಪತ್ರ ಕೊಡಲು ಕಾನೂನು ಇದೆಯೇ;

ಇ) ಈ ಹಕ್ಕು ಪತ್ರಗಳನ್ನು ತಹಶೀಲ್ದಾರೆ ಮೂಲಕ ನೀಡದೆ ಜಿಲ್ಲಾಧಿಕಾರಿಗಳು ಯಾವ ಕಾನೂನು ವ್ಯಾಪ್ತಿಯಲ್ಲಿ ನೀಡಿರುತ್ತಾರೆ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) 621.00 ಎಕರೆ.

ಫಲಾನುಭವಿಗಳ ಹೆಸರು ಹಾಗೂ ಜಮೀನುನ ವಿವರಗಳನ್ನು ಪ್ರತ್ಯೇಕವಾಗಿ ಮಾನ್ಯ ಶಾಸಕರಿಗೆ ಕಿರುಹೊತ್ತಿಗೆಯಲ್ಲಿ ಒದಗಿಸಲಾಗುತ್ತದೆ.

ಆ) ಇಲ್ಲ.

ಇ) ಭದ್ರಾ ಅಭಯಾರಣ್ಯ ಪುನರ್ವಸತಿ ಯೋಜನೆಯಡಿ, ಸಂತ್ರಸ್ಥ ಕುಟುಂಬಗಳಿಗೆ ನಿರ್ದಿಷ್ಟ ಮಿತಿಯಲ್ಲಿ ಜಮೀನು ಮಂಜೂರು ಮಾಡಲು ಅಚಕಾಶಗಳನ್ನು ಕಲ್ಪಿಸಿ ಸರ್ಕಾರವು ಆದೇಶ ಸಂ:ಆರ್‌ಡಿ 69 ಆರ್‌ಇಹೆಚ್ 97, ದಿನಾಂಕ: 28–3–2001ರ ಪ್ರಕಾರ ಮಂಜೂರಾತಿ ನೀಡಿರುತ್ತದೆ. ಈ ಆದೇಶದ ಮೇರೆಗೆ ವಿಶೇಷ ಸನ್ನಿವೇಶಕ್ಕನುಗುಣವಾಗಿ ದಾಖಲೆಗಳು ಮತ್ತು ಹಕ್ಕುಪತ್ರಗಳನ್ನು ತಯಾರಿಸಿ ಜಿಲ್ಲಾಧಿಕಾರಿಯವರ ಸಹಿಯೊಂದಿಗೆ ಸಂಬಂಧಪಟ್ಟ ಸಂತ್ರಸ್ಥರಿಗೆ ನೀಡಲಾಗಿರುತ್ತದೆ. 1969ರ ಭೂ ಮಂಜೂರಿ ನಿಯಮಗಳ ಮೇರೆಗೆ ವಿದ್ಯುಕ್ತ ಮಾರ್ಗಸೂಚಿಗಳನ್ನು ಅನುಸರಿಸಿ ಮಂಜೂರು ಮಾಡಿದ ಜಮೀನುಗಳಲ್ಲದರಿಂದ ಹಕ್ಕುಪತ್ರ ತಹಶೀಲ್ದಾರರ ಮೂಲಕ ನೀಡುವ ಅಗತ್ಯವಿರುವುದಿಲ್ಲ.

ಬೆಳ್ತಂಗಡಿ ತಾಲ್ಲೂಕಿನ ಬಗರ್‌ಹುಕುಂ ಸಾಗುವಳಿದಾರರ ಖಾತಾ ಬದಲಾವಣೆ ಪ್ರಕ್ರಿಯೆ

2499 (3012) : ಶ್ರೀ ಪ್ರಭಾಕರ ಬಂಗೇರ.ಕೆ. (ಬೆಳ್ತಂಗಡಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಬಗರ್ ಹುಕುಂ ಸಾಗುವಳಿದಾರರಿಂದ ನಮೂನೆ 50 ಹಾಗೂ ನಮೂನೆ 53ರಲ್ಲಿ ಸ್ವೀಕರಿಸಲಾದ ಒಟ್ಟು ಅರ್ಜಿಗಳ ಸಂಖ್ಯೆ ಎಷ್ಟು; ಹೋಬಳಿ ಹಾಗೂ ಗ್ರಾಮವಾರು ವಿವರಗಳನ್ನು ನೀಡುವುದು;

ಆ) ಸ್ವೀಕೃತವಾದ ಅರ್ಜಿಗಳ ವಿಲೇವಾರಿಯ ಪ್ರಗತಿಯ ವಿವರಗಳೇನು; ವಿಲೇವಾರಿಯಾಗದೆ ಉಳಿದಿರುವ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಕಾಲಮಿತಿಯನ್ನು ನಿಗದಿಗೊಳಿಸಲಾಗುವುದೇ;

ಇ) ಜಮೀನಿನ ಖಾತಾ ಬದಲಾವಣೆಗೆ ಕಂದಾಯ ಇಲಾಖೆಯು ನಿಗಧಿಗೊಳಿಸಿದ ಕಾಲಮಿತಿ ಎಷ್ಟು; ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಸಾವಿರಾರು ಇಂತಹ ಪ್ರಕರಣಗಳು ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದ್ದಲ್ಲಿ ಶೀಘ್ರ ಖಾತಾ ಬದಲಾವಣೆಗಾಗಿ ಕೈಗೊಳ್ಳುವ ಕ್ರಮಗಳೇನು;